**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ: ಸಿ8(7)ಶಾ.ಶಿ.ಅ ಸುತ್ತೋಲೆ:01:2005-06

ದಿನಾಂಕ:-25-01-2006

**ಸುತ್ತೋಲೆ**

ವಿಷಯ:-ಖಾಸಗಿ ಶಾಲೆಗಳಿಗೆ ಮಾನ್ಯತೆ ನವೀಕರಣ ನೀಡುವ ಬಗ್ಗೆ.

ಉಲ್ಲೇಖ:-ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ:-17-09-2005

↔ ↔ ↔

ರಾಜ್ಯದಲ್ಲಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮಾನ್ಯತೆ ಹಾಗು ಮಾನ್ಯತೆ ನವೀಕರಣ ನೀಡುವ ಬಗ್ಗೆ ದಿನಾಂಕ:-17-09-2005 ರ ಈ ಕಛೇರಿಯ ಸುತ್ತೋಲೆಯಲ್ಲಿ ಸರಳೀಕೃತ ಕ್ರಮ ವಹಿಸಲು ಈಗಾಲೇ ಸೂಚನೆಗಳನ್ನು ನೀಡಲಾಗಿದೆ.

ಆದಾಗಿಯೂ ಮಾನ್ಯತೆ ನೀಡುವಲ್ಲಿ ವಿನಾ ಕಾರಣ ವಿಳಂಬ ಮಾಡುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿದೆ.

ಆದ್ದರಿಂದ ಶಾಲೆಗಳ ಮಾನ್ಯತೆ ನೀಡುವ ಕುರಿತು ಅಗತ್ಯ ಮಾಹಿತಿಗಳನ್ನು ಒಮ್ಮೆಲೇ ತರಿಸಿಕೊಂಡು, ಕೂಡಲೇ ಇತ್ಯರ್ಥಪಡಿಸುವಂತೆ ತಿಳಿಸಿದೆ.

ಸದರಿ ಪ್ರಸ್ತಾವನೆಗಳ ಮೇಲೆ ವಿನಾ: ಕಾರಣ ಆಕ್ಷೇಪಣೆಗಳನ್ನು ಪುನರಾವರ್ತನೆ ಮಾಡದೆ, ಮಾನ್ಯತೆ ನವೀಕರಣದ ಪ್ರಸ್ತಾವನೆಗಳನ್ನು ಸಕಾಲದಲ್ಲಿ ಪಡೆದುಕೊಂಡು, ತ್ವರಿತವಾಗಿ ಇತ್ಯರ್ಥಪಡಿಸಲು ನಿಯಮಗಳಡಿಯಲ್ಲಿ ಅಗತ್ಯ ಕ್ರಮ ವಹಿಸುವಂತೆ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಹಾಗು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

25/01/06

**(ಎಂ.ಚಂದ್ರಶೇಖರಯ್ಯ)**
**ನಿರ್ದೇಶಕರು (ಪ್ರೌಢ ಶಿಕ್ಷಣ)**

**ಗೆ**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗ ವಿಭಾಗ
2. ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಮತ್ತು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

\\Type2\est2\6147(1).doc